<u>ಇಂದು ದಿನಾಂಕಃ **11.01.2021** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u> ನಾನು ಚಿನ್ನ-ಬೆಳ್ಳಿ ಕೆಲಸ ಮಾಡುತ್ತೇನೆ. ನಾನು ಬಿ.ಎ ಪದವೀಧರ. ನನ್ನ ತಂದೆಗೆ ಈಗ 70 ವರ್ಷಗಳಾಗಿರುತ್ತದೆ. ನನ್ನ ತಂದೆ ಈಗಲೂ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಬಿ.ಪಿ ಶುಗರ್ ಇದ್ದು, ವೈಯೋ ಸಹಜ ಕಾಯಿಲೆಯಿಂದ ಬಲಳುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿದ್ದೀರ ಎಂದರೆ ಮಾಡಿರುವುದಿಲ್ಲ. ನನ್ನ ತಂದೆ ಆರೋಗ್ಯವಾಗಿದ್ದರೂ ಸಹ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರುತ್ತದೆ ಎನ್ನುವ ಕಾರಣಕ್ಕಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರ ಎಂದರೆ ತಿಳಿದುಕೊಂಡಿದ್ದೇನೆ. ದಾವೆಯಲ್ಲಿ ಹೇಳಿರುವ ವಿಚಾರವನ್ನು ತಿಳಿದುಕೊಂಡಿದ್ದೇನೆ ಎಂದರೆ ಸರಿ. ತಕರಾರಿನಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿದ್ದೀರ ಎಂದರೆ ತಿಳಿದುಕೊಂಡಿದ್ದೇನೆ. ದಾವೆಯನ್ನು ಯಾರ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ಚಂದ್ರಶೇಖರಾಚಾರ್ ರವರು ನನ್ನ ತಂದೆ ಗಂಗಾಧರಚಾರ್, ಅಣ್ಣಯ್ಯಚಾರ್, ಬೀರಮ್ಮ ಮತ್ತು ಪುಟ್ಟಚಾರಿ ರವರ ವಿರುದ್ಧ ಸಲ್ಲಿಸಿದ್ದಾರೆ. ದಾವಾಸ್ತಿಯ ಹೌಸ್ ಲೀಸ್ಟ್ ಮತ್ತು ಜಂಜರ್ ನಂಬರ್ ಎಷ್ಟು ಎಂದರೆ ಸಾಕ್ಷಿಯು 30 ಮತ್ತು 31 ಎರಡೂ ಬರುತ್ತದೆ ಎಂದು ಹೇಳುತ್ತಾರೆ. ನಾನು ಹೇಳಿರುವ ಹೌಸ್ ಲೀಸ್ಟ್ ನಂಬರ್ ಸುಳ್ಳು ಎಂದರೆ ಸರಿಯಲ್ಲ. ದಾವಾಸ್ತಿಯ ಹೌಸ್ ಲೀಸ್ಟ್ ನಂಬರ್ 31/1, ಜಂಜರ್ ನಂಬರ್ 34 ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಚಕ್ಕುಬಂದಿ ಪೂರ್ವ-ಪಶ್ಚಿಮಕ್ಕೆ ಪಂಚಾಯಿತಿ ರಸ್ತೆ, ಉತ್ತರಕ್ಕೆ ಹಳೆ ಬಿ.ಎಂ. ರಸ್ತೆ, ದಕ್ಷಿಣಕ್ಕೆ ಬೆಟ್ಟಾಚಾರಿ ಮತ್ತು ಭಾಗ್ಯಮ್ಮರವರ ನಿವೇಶನ ಮತ್ತು ಮೊಗಣ್ಣಶೆಟ್ಟಿ ಯವರ ನಿವೇಶನ ಇರುತ್ತದೆ. ದಾವಾಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 33 ಗಜ, ಉತ್ತರ-ದಕ್ಷಿಣ 16 1/2 ಗಜ ಇರುತ್ತದೆ.

ವಾದಿಯ ತಂದೆಯ ಹೆಸರು ಏನು ಎಂದರೆ ದೊಡ್ಡತಮ್ಮಯಾಚಾರಿ. ಸಿದ್ದಾಚಾರಿಯವರ ತಂದೆಯ ಹೆಸರು ದೊಡ್ಡತಮ್ಮಯ್ಯಾಚಾರಿ. ಸಾಕ್ಷಿಯು ಮುಂದುವರಿದು ವಾದಿಯ ತಂದೆಯ ಹೆಸರು ಸಿದ್ದಾಚಾರಿ ಎಂದು ಹೇಳುತ್ತಾರೆ. ನನಗೆ ಓದಲು ಬರುತ್ತದೆ. ನಿಪಿ - 5 ರ ಹೌಸ್ ಲೀಸ್ಟ್ ನ ನಂಬರ್ 30/2 ರಲ್ಲಿ ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಾಚಾರಿ ಎಂದು ನಮೂದಾಗಿರುತ್ತದೆ. ನಿಪಿ - 5 ರಲ್ಲಿ ನಮೂದಾಗಿರುವ ಸಿದ್ದಾಚಾರಿ ವಾದಿಯ ತಂದೆ ಎಂದರೆ ಸರಿ. ಹೌಸ್ ಲೀಸ್ಟ್ ನ ನಂಬರ್ 31/1 ರಲ್ಲಿ ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಾಚಾರಿ ಎಂದು

ನಮೂದಾಗಿರುತ್ತದೆ ಎಂದರೆ ಸರಿ, ಅದು ಹಳೆಯದ್ದಾಗಿರುತ್ತದೆ. ಹೌಸ್ ಲೀಸ್ಟ್ ನ ನಂಬರ್ 31/2 ರಲ್ಲಿ ಸಿದ್ದಾಚಾರಿ ಬಿನ್ ದೊಡ್ಡತಮ್ಮಯ್ಯಾಚಾರಿ ಎಂದು ನಮೂದಾಗಿರುತ್ತದೆ ಎಂದರೆ ಅದು ಹಳೆಯ ದಾಖಲೆಯಾಗಿರುತ್ತದೆ. ಮೇಲೆ ಸೂಚಿಸಿದ ಮೂರು ಸ್ವತ್ತುಗಳು ವಾದಿಯ ತಂದೆಗೆ ಸೇರಿದ ಸ್ವತ್ತುಗಳಾಗಿರುತ್ತವೆ ಎಂದರೆ ಹಿಂದೆ ಅವರ ಹೆಸರಿನಲ್ಲಿತ್ತು, ಈಗ ಇರುವುದಿಲ್ಲ. ಈ ಹಿಂದೆ ವಾದಿಯ ತಂದೆಯ ಹೆಸರಿನಲ್ಲಿತ್ತು ಎಂದರೆ ಯಾವಾಗ ಇತ್ತು ಎಂದರೆ 1931 ರಲ್ಲಿ ಸಿದ್ದಾಚಾರಿಯವರಿಗೆ ವಿಲ್ ಮುಖಾಂತರ ಮೇಲೆ ಸೂಚಿಸಿದ್ದ ಆಸ್ತಿಗಳು ಬಂದಿರುತ್ತವೆ. ನಂತರ ಅವರು ಮಾರಾಟ ಮಾಡಿರುತ್ತಾರೆ. ಸದರಿಯವರು ಯಾವ ಯಾವ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ 30 ಮತ್ತು 31 ರ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ಮೇಲೆ ಸೂಚಿಸಿದ ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನೀವು ಖರೀದಿಸಿದ್ದೇನೆ ಎಂದು ಹೇಳುವ 31/2 ಬಿ ಯ ಆಸ್ತಿಯನ್ನು ಯಾರಿಂದ ಖರೀದಿಸಿದ್ದೀರ ಎಂದರೆ ಮಹದೇವಮ್ಮರವರಿಂದ ಖರೀದಿಸಿದ್ದೇನೆ. ನಾನು 31/2 ಬಿ ಆಸ್ತಿಯನ್ನು ಖರೀದಿಸಿದ್ದೇನೆ ಎಂದರೆ ಸರಿ. ಆಸ್ತಿ ಸಂ. 31/2 ಮತ್ತು ದಾವಾಸ್ತಿ ಬೇರೆ ಬೇರೆ ಎಂದರೆ ಸರಿಯಲ್ಲ. ಸಿದ್ದಾಚಾರಿಯವರಿಗೆ ಸಂಬಂಧಿಸಿದ ಮೂರು ಆಸ್ತಿಗಳ ಪೈಕಿ 31/2 ರ ನಿವೇಶನವನ್ನು ಮಾತ್ರ ನಾನು ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅದರೊಂದಿಗೆ 30/1 ರ ಆಸ್ತಿಯನ್ನು ಸಹ ಖರೀದಿಸಿರುತ್ತೇನೆ. 30/2 ಮತ್ತು 31/2 ಬೇರೆ ಬೇರೆ ಆಸ್ತಿಗಳು ಎಂದರೆ ಸರಿ. ನಿಡಿ - 1 ರಲ್ಲಿರುವ ಆಸ್ತಿಯ ನಂಬರ್ ಗ್ರಾಮಪಂಚಾಯಿತಿಯ ದಾಖಲೆಗಳ ಪ್ರಕಾರ 33/30/2/ಡಿ ಆಗಿರುತ್ತದೆ ಎಂದರೆ ಸರಿ. ನಿಡಿ - 1 ದಾವಾಸ್ತಿಗೆ ಸಂಬಂಧಪಡದೇ ಇರುವ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ, ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ. ಸದರಿ ವಿಚಾರವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ - 6 ಮತ್ತು 9 ಇ-ಖಾತೆಯಾಗಿದ್ದು, ಅದು ನನ್ನ ತಂದೆ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಸಂ. 32/30/1 ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಗಳನ್ನು ದಾವೆಗಾಗಿ ಸೃಷ್ಟಿ ಮಾಡಿಕೊಂಡು ಹಾಜರು ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನನ್ನ ತಂದೆ ಕಮಲಮ್ಮ ಮತ್ತು ಅವರ ಮಗ ಮಂಜುನಾಥಾಚಾರಿಯವರಿಂದ ಖರೀದಿಸಿರುತ್ತಾರೆ. ಕಮಲಮ್ಮರವರ ಗಂಡನ ಹೆಸರು ಲಿಂಗಣ್ಣಸೋಮಾಚಾರಿ. ಅವರನ್ನು ಲಿಂಗಣ್ಣಾಚಾರಿ ಎಂದು ಸಹ ಕರೆಯುತ್ತಿದ್ದರು. ಲಿಂಗಣ್ಣಾಚಾರಿಯವರು 1970 ರಲ್ಲಿ ಸಿದ್ದಾಚಾರಿಯವರಿಂದ ಸದರಿ ಆಸ್ತಿಯನ್ನು ಖರೀಸಿದಿರುತ್ತಾರೆ. ಆಸ್ತಿಯನ್ನು ಖರೀದಿಸಬೇಕಾದರೆ ಮೂಲ

ಯಾರಿಂದ, ಹೇಗೆ ಬಂದಿರುತ್ತದೆ ಎಂದು ನೋಡಿ ಖರೀದಿಸಲಾಗುತ್ತದೆ ಎಂದರೆ ಸರಿ. ಮೂಲದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರ ಎಂದರೆ ಸಲ್ಲಿಸಿದ್ದೇನೆ. ಲಿಂಗಣ್ಣಚಾರಿಯವರ ಕ್ರಯಪತ್ರ ನಿಡಿ - 33 ಅನ್ನು ನೋಡಿದ್ದೇನೆ. ಸದರಿ ಕ್ರಯಪತ್ರದಲ್ಲಿರುವ ಆಸ್ತಿ ಸಿದ್ದಾಚಾರಿಯವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಯನ್ನು ಖರೀದಿಸಬೇಕಾದರೆ ಅವರ ಮಕ್ಕಳ ಸಹಿಯನ್ನೂ ಸಹ ಪಡೆಯಬೇಕು ಎಂದರೆ ಸರಿ. ಸಿದ್ದಾಚಾರಿಯವರಿಗೆ 8 ಜನ ಮಕ್ಕಳು. ಅವರ ಮೊದಲನೇ ಹೆಂಡತಿ ಲಿಂಗಮ್ಮ, ಅವರ ಮಕ್ಕಳೆಂದರೆ, ವಾದಿ ಚಂದ್ರಶೇಖರಯಾಚಾರಿ, ಪುಟ್ಟಸ್ವಾಮಾಚಾರಿ, ಪುಟ್ಟತಾಯಮ್ಮ, ನರಸಿಂಹಾಚಾರಿ ಮತ್ತು ಎರಡನೇ ಹೆಂಡತಿ ಕಾಳಮ್ಮರವರಿಗೆ ಕೃಷ್ಣಾಚಾರಿ, ಚೆಲುವಾಚಾರಿ, ಸಣ್ಣಾಚಾರಿ ಮತ್ತ ಸಾವಿತ್ರಮ್ಮ ಆಗಿರುತ್ತಾರೆ ನಾನಗಲಿ, ಲಿಂಗಣ್ಣಚಾರಿಯಾಗಲಿ ಸಿದ್ದಾಚಾರಿಯವರ 8 ಜನ ಮಕ್ಕಳ ಸಹಿಗಳನ್ನು ಪಡೆದಿಲ್ಲ ಎಂದರೆ ನಾವು ಕಮಲಮ್ಮ ಮತ್ತು ಮಹದೇವಮ್ಮರವರಿಂದ ಖರೀದಿಸಿದ್ದೇವೆ. ಸಿದ್ದಾಚಾರಿಯವರ ಮಕ್ಕಳ ಸಹಿಗಳನ್ನು ಪಡೆಯಬೇಕೆಂದು ನಮಗೆ ಗೊತ್ತಿಲ್ಲ. ಸಿದ್ದಾಚಾರಿಯವರ ಮಕ್ಕಳ ಸಹಿಗಳನ್ನು ಯಾವ ಕಾರಣಕ್ಕಾಗಿ ಪಡೆದಿಲ್ಲ ಎಂದು ಲಿಂಗಚಾರಿಯವರನ್ನು ಕೇಳಿದ್ದೀರ ಎಂದರೆ ಕೇಳಿರುವುದಿಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ ಮೊಮ್ಮಕ್ಕಳಿಗೂ ಹಕ್ಕು ಇರುತ್ತದೆ ಎಂದರೆ ಸರಿ. ಆದರೆ ದಾವಾಸ್ತಿಯಲ್ಲಿ ಹಕ್ಕು ಇರುವುದಿಲ್ಲ. ಲಿಂಗಣ್ಣಚಾರಿಯವರಿಂದ ಕ್ರಯ ಪಡೆಯುವ ಸಂದರ್ಭದಲ್ಲಿ ಸಿದ್ದಾಚಾರಿಯವರ ಮಕ್ಕಳ ಸಹಿಗಳನ್ನು ಹಾಕಿಸಿಕೊಡುವಂತೆ ಕೋರಿರುತ್ತೀರ ಎಂದರೆ ಕೋರಿರುವುದಿಲ್ಲ. ಸಿದ್ದಾಚಾರಿಯವರ ಮಕ್ಕಳಿಂದ ಆಸ್ತಿಯನ್ನು ಲಪಟಾಯಿಸಬೇಕೆಂದು ಉದ್ದೇಶದಿಂದ ಕಾನೂನುಬಾಹಿರವಾಗಿ ಆಸ್ತಿಯನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ.

ನಿಡಿ - 37, 38, 39, 41 ರಿಂದ 46 ರ ದಾಖಲೆಗಳನ್ನು ಯಾರು ಪಡೆದಿರುತ್ತಾರೆ ಎಂದರೆ ನಾನೇ ಪಡೆದಿರುತ್ತೇನೆ. ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ಯಾರ ಹೆಸರನ್ನು ನಮೂದು ಮಾಡಲಾಗುತ್ತದೋ ಅವರ ಹೆಸರನ್ನೇ ಉಳಿದ ದಾಖಲೆಗಳಲ್ಲಿ ಪಂಚಾಯಿತಿಯವರು ನಮೂದು ಮಾಡಬೇಕು ಎಂದರೆ ಸರಿ. ನಿಡಿ 45 ಅನ್ನು ಹೊರತುಪಡಿಸಿ 37 ರಿಂದ 46 ರವರೆಗಿನ ದಾಖಲೆಗಳಲ್ಲಿ ನಾನು ಹೇಳಿರುವಂತೆ ಚೆಕ್ಕುಬಂದಿಯನ್ನು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಪಂಚಾಯಿತಿ ದಾಖಲೆಗಳ ಆಧಾರದಲ್ಲಿ ಚೆಕ್ಕುಬಂದಿಯನ್ನು ನಮೂದು ಮಾಡಿರುತ್ತಾರೆ. ಪಂಚಾಯಿತಿಯವರು ಒಂದು ಸ್ವತ್ತಿಗೆ ಯಾವ ರೀತಿ ನಮೂದು ಮಾಡಿರುತ್ತಾರೋ ಅದೇ ರೀತಿ ಎಲ್ಲಾ ಸ್ವತ್ತುಗಳಿಗೂ ನಮೂದು ಮಾಡಬೇಕು ಎಂದರೆ ಪಂಚಾಯಿತಿ ದಾಖಲೆಗಳ ಪ್ರಕಾರ ನಮೂದು ಮಾಡುತ್ತಾರೆ. ಪಂಚಾಯಿತಿ ಅಧಿಕಾರಿಗಳು ನಮ್ಮೊಂದಿಗೆ ಚೆನ್ನಾಗಿದ್ದಾರೆ ಎಂದರೆ ಸರಿಯಲ್ಲ.

ನಿಡಿ 45 ಅನ್ನು ನ್ಯಾಯಾಲಯಕ್ಕೆ ನಾನೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಇದರಲ್ಲಿ ಯಾವುದೇ ಚೆಕ್ಕುಬಂದಿಯನ್ನು ನಮೂದು ಮಾಡಿಲ್ಲ, ಉದ್ದೇಶ ಪೂರ್ವಕವಾಗಿ ಕೈಬಿಡಲಾಗಿದೆ ಎಂದರೆ ಸರಿಯಲ್ಲ. ನಿಡಿ 45 ಅನ್ನು ಹೊರತುಪಡಿಸಿ 37 ರಿಂದ 46 ರವರೆಗಿನ ದಾಖಲೆಗಳಲ್ಲಿ ಚೆಕ್ಕುಬಂದಿಯನ್ನ್ನ ನಮೂದಿಸಿ ದಾವೆಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ರಾಜಕೀಯ ಪ್ರಭಾವ ಮತ್ತು ಹಣಬಲದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು 100/- ರೂ ಖರ್ಚಿನ ಮೇರೆಗೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.